

ಮಾತನಾಡಿಕೊಳ್ಳುತ್ತಿದ್ದ. ಈಕೆಗೆ ಮಗುವಿನ ಜ್ವರಕ್ಕಿಂತಲೂ ಹೆಚ್ಚು ಬಾಧಿಸುತ್ತಿದ್ದುದು ತನ್ನ ಗಂಡನ ಮಾನಸಿಕ ಸ್ಥಿತಿಯ ಬಗ್ಗೆ. ಮಕ್ಕಳು ಜ್ವರ ಹೆಚ್ಚಾದಾಗ ಏನೇನೋ ಬಡಬಡಿಸುವಂತೆ ಇವನು ಏನೇನೋ ಗೊಣಗುಟ್ಟುತ್ತಿದ್ದ. ಲೀಡರ್ ಯಾರ ಮೇಲೆ ತನ್ನ ಭಾಷಣದಲ್ಲಿ ಮುಗಿಬೀಳುತ್ತಿದ್ದನೋ, ಯಾವ ಧರ್ಮವನ್ನು ಭೂಮಿಯಿಂದ ನಾಶ ಮಾಡಿಬಿಡಬೇಕು ಎಂದು ತನ್ನ ಹಿಂಬಾಲಕರಿಗೆ ಕರೆಕೊಡುತ್ತಿದ್ದನೋ, ಆ ಧರ್ಮದವರೇ ಸೇಡಿನಿಂದ ಈ ಕೃತ್ಯವನ್ನು ಎಸಗಿದ್ದಾರೆ ಎಂಬುದು ಇವನ ನಂಬಿಕೆಯಾಗಿತ್ತು. ಆದ್ದರಿಂದಲೇ ತನ್ನ ನಾಯಕನ ಮೇಲೆ ಹಲ್ಲೆಯಾದ ದಿನದಿಂದ ಹೆಂಡತಿಗೆ 'ಆ ಧರ್ಮ'ಕ್ಕೆ ಸೇರಿದವರಾದ ಪಕ್ಕದ ಮನೆಗೆ ಹೋಗದಂತೆ ಮತ್ತು ಅವರ ಜೊತೆ ಮಾತನಾಡದಂತೆ ಕಟ್ಟಪ್ಪಣೆ ವಿಧಿಸಿದ.

ಅಕ್ಕಪಕ್ಕದ ಈ ಎರಡು ಕುಟುಂಬಗಳು ಬೇರೆ ಬೇರೆ ಧರ್ಮದವರಾದರೂ ಸಹ, ಇವರ ತಂದೆಯ ಕಾಲದಿಂದಲೂ ಒಬ್ಬರಿಗೊಬ್ಬರು ಅನ್ಯೋನ್ಯವಾಗಿದ್ದರು. ಗಂಡಸರಿಗಿಂತಲೂ ಹೆಚ್ಚಾಗಿ ಎರಡೂ ಮನೆಯ ಹೆಂಗಸರು ಬಹಳ ಆತ್ಮೀಯರಾಗಿದ್ದರು. ಇವರ ಮನೆಗಳು ಪುಟ್ಟದಾಗಿದ್ದರೂ ಕೂಡ, ಮನೆಯ ಹಿತ್ತಲುಗಳು ಹೂವಿನ ಗಿಡಗಳಿಂದ, ಸಣ್ಣ ಪುಟ್ಟ ತರಕಾರಿ ಗಿಡಗಳಿಂದ ತುಂಬಿ, ನೋಡಲು ಕಣ್ಣಿಗೆ ಹಬ್ಬವಾಗಿತ್ತು. ಹೆಂಗಸರು ತಮ್ಮ ತಮ್ಮ ಹಿತ್ತಲಿನಲ್ಲಿ ಮನೆಗಾಗುವಷ್ಟು ತರಕಾರಿ ಮತ್ತು ಸೊಪ್ಪನ್ನು ಬೆಳೆಯುತ್ತಿದ್ದರು. ಬೆಳೆದಿದ್ದನ್ನು ಪರಸ್ಪರ ಹಂಚಿಕೊಂಡು ಬದುಕುತ್ತಿದ್ದರು. ಎರಡು ಮನೆಯ ಹಿತ್ತಲುಗಳಿಗೆ ಯಾವುದೇ ನಿರ್ದಿಷ್ಟ ಗಡಿಯ ರೇಖೆಯಿರಲಿಲ್ಲ. ಅವರ ಮನೆಯ ಹಿತ್ತಲಿನಲ್ಲಿರುವ ಕರಿಬೇವನ್ನು ಇವರೂ, ಇವರ ಹಿತ್ತಲಿನಲ್ಲಿರುವ ತುಪ್ಪದ ಹೀರೆಕಾಯನ್ನು ಅವರೂ, ಪರಸ್ಪರ ಯಾವುದೇ ಅನುಮತಿಯಿಲ್ಲದೆ ಉಪಯೋಗಿಸುತ್ತಿದ್ದರು. ಎರಡೂ ಮನೆಯ ಹೆಂಗಸರು ಸಂಜೆ ಮನೆಯ ಹಿತ್ತಲಿನಲ್ಲಿ ಸೇರಿ, ಪ್ರಪಂಚದ ಸಕಲವನ್ನೂ ಚರ್ಚಿಸುತ್ತಿದ್ದರು. ಒಬ್ಬರ ಮನೆಗೆ ಯಾರಾದರೂ ಬಂಧುಗಳು ಬಂದು, ವಿಶೇಷ ಅಡುಗೆಯೇನಾದರೂ ತಯಾರಾದರೆ, ಅದು ಪಕ್ಕದ ಮನೆಗೂ ರವಾನೆಯಾಗುತ್ತಿತ್ತು. ಹೀಗಿರುವ ಸ್ನೇಹವನ್ನು ಅಚಾನಕ್ಕಾಗಿ ಮುರಿದುಕೊಳ್ಳಬೇಕು ಎಂಬ ಗಂಡನ ಫರ್ಮಾನನ್ನು ಒಪ್ಪಲು ಈಕೆ ತಯಾರಿರಲಿಲ್ಲ. ಯಾವನೋ ಒಬ್ಬ ಅವಿವೇಕಿ ಮಾಡಿದ ತಪ್ಪಿಗೆ, ಅದೇ ಧರ್ಮದವರಾದ ಮಾತ್ರಕ್ಕೆ ಅದಕ್ಕೆ ಸಂಬಂಧವಿಲ್ಲದ ಇವರೇಕೆ ಉತ್ತರಿಸಬೇಕು? ಎಂಬ ಹೆಂಡತಿಯ ವಾದ ಗಂಡನಿಗೆ ಪಥ್ಯವಾಗಲಿಲ್ಲ. ಬಾಲ್ಯದಿಂದಲೂ ನೆರೆಹೊರೆಯವರಾಗಿ, ಸ್ನೇಹಿತರಾಗಿ ಒಂದೇ ತರಗತಿಯಲ್ಲಿ ಓದಿ, ಆಡಿ ಬೆಳೆದಿದ್ದ ಈತ ಮತ್ತು ಆತ ಇತ್ತೀಚೆಗೆ ನಡೆದ ಗಲಭೆಗಳಿಂದ ಮಾನಸಿಕವಾಗಿ ದೂರವಾಗಿ, ಮಾತು ಬಿಟ್ಟಿದ್ದರು. ಇಂತಹ ಕ್ಷುಲ್ಲಕ ರಾಜಕೀಯಕ್ಕೆ ತಲೆಕೆಡಿಸಿಕೊಳ್ಳದ ಎರಡೂ ಮನೆಯ ಹೆಂಗಸರ ಸ್ನೇಹ ಮಾತ್ರ ಮುಂದುವರೆದಿತ್ತು. ಅಂದೂ ಕೂಡ ಎಂದಿನಂತೆ